ಸಾಕ್ಷಿಯನ್ನು ದಿ: 24.07.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನನ್ನ ತಂದೆಗೆ 6 ಜನ ಮಕ್ಕಳು. ನಾವುಗಳು 2 – 3 ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ನಾವು ಬರವಣಿಗೆ ಮೂಲಕ ಬೇರೆಯಾಗಿದ್ದೇವೋ ಇಲ್ಲವೋ ಗೊತ್ತಿಲ್ಲ. ನನ್ನ ತಾತನ ಸ್ವತ್ತು ಬರಬೇಕೆಂದು ಈ ದಾವೆ ಸಲ್ಲಿಸಿರುತ್ತೇನೆ. ನಾನು ವಾಸ ಮಾಡುತ್ತಿರುವ ಮನೆಯ ವಿಸ್ತೀರ್ಣ ಗೊತ್ತಿಲ್ಲ. ನಾನು ನನ್ನ ಹೆಂಡತಿ ಒಟ್ಟಿಗೆ ವಾಸ ಮಾಡುತ್ತಿದ್ದೇವೆ. ನನ್ನ ಅಣ್ಣ ಹನುಮೇಗೌಡ 3 ವರ್ಷಗಳಿಂದ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದರು. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರ ಮನೆಯಲ್ಲಿ ನನ್ನ ಅಣ್ಣ ಹನುಮೇಗೌಡ ವಾಸಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರ ಮನೆಯಲ್ಲಿ ನನ್ನ ತಮ್ಮ ಸಿದ್ದೇಗೌಡ ವಾಸಮಾಡುತ್ತಿದ್ದಾನೆ ಎಂದರೆ ಸರಿ. ನಿಡಿ.2 ರ ಮನೆಯಲ್ಲಿ ನನ್ನ ತಮ್ಮ ಸಿದ್ದೇಗೌಡ ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾನೆಂದು ಗೊತ್ತಿಲ್ಲ. ನಾವು ಜಮೀನುಗಳನ್ನು 2 – 3 ವರ್ಷಗಳಿಂದ ಬೇರೆ ಬೇರೆಯಾಗಿ ವ್ಯವಸಾಯ ಮಾಡುತ್ತಿದ್ದೇವೆ. ನಿಡಿ.1 ರ ಮನೆ ಯಾರ ಹೆಸರಿನಲ್ಲಿರುತ್ತದೆ ಗೊತ್ತಿಲ್ಲ. ನಾನು ವಾಸ ಮಾಡುತ್ತಿರುವ ಮನೆ ನನ್ನ ತಾತನ ಹೆಸರಿನಲ್ಲಿರುತ್ತದೆ. ನಿಡಿ.2 ರ ಮನೆ ನನ್ನ ತಾತನ ಹೆಸರಿಗಿರುತ್ತದೆ. ನಾನು ವಾಸ ಮಾಡುವ ಮನೆಯ ನನ್ನ ತಾತನ ಹೆಸರಿಗೆ ಇದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿರುತ್ತೇನೆ. ನನ್ನ ಹೆಸರಿಗೆ ಯಾವುದೇ ಮನೆಯಿರುವುದಿಲ್ಲ. ನನ್ನ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ. ನನಗೆ ತಿಬ್ಬೇಗೌಡನ ಮಗ ತಿಬ್ಬೇಗೌಡ ಎಂದು ಮಾತ್ರ ಕರೆಯುತ್ತಾರೆ, ಬೇರೆ ಯಾವುದೇ ಹೆಸರು ಇರುವುದಿಲ್ಲ. ನನ್ನ ತಂದೆಗೆ ತಿಬ್ಬೇಗೌಡ ಎಂದು ಮಾತ್ರ ಹೆಸರಿತ್ತು. ದಾವಾ ಆಸ್ತಿ ಎಷ್ಟು ಅಳತೆಯಿದೆ ಗೊತ್ತಿಲ್ಲ. ದಾವಾ ಆಸ್ತಿ ಪಂಚಾಯಿತಿಗೆ ಸೇರಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ದಾವಾ ಆಸ್ತಿಯ ವಿದ್ಯುತ್ ಶುಲ್ಕವನ್ನು ಯಾರು ಕಟ್ಟುತ್ತಿಲ್ಲ. ದಾವಾ ಆಸ್ತಿಯ ನೀರಿನ ಶುಲ್ಕವನ್ನು ಯಾರು ಕಟ್ಟುತ್ತಿದ್ದಾರೆ ಗೊತ್ತಿಲ್ಲ. ದಾವಾ ಆಸ್ತಿಯ ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕವನ್ನು 1 ನೇ ಪ್ರತಿವಾದಿ ಕಟ್ಟುತ್ತಿದ್ದಾನೆಂದರೆ ಸಾಕ್ಷಿಯು ನಾನು ಸಹ

ಕಟ್ಟುತ್ತಿದ್ದೇನೆಂದು ನುಡಿಯುತ್ತಾರೆ. ದಾವಾ ಆಸ್ತಿಯ ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕದ ಪಾವತಿ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆಯಿಲ್ಲ. ನಾನು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗ ಪತ್ರ ಯಾರ ಹತ್ತಿರವಿದೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಹನುಮೇಗೌಡನ ಮಗನನ್ನು ಕೇಳಬೇಕು ಎಂದು ನುಡಿಯುತ್ತಾರೆ. ನಾನು ವಾಸ ಮಾಡುತ್ತಿರುವ ಮನೆಯ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತಿಲ್ಲ. ನಾನು ವಾಸ ಮಾಡುತ್ತಿರುವ ಮನೆಯ ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕ ನಾನೇ ಕಟ್ಟುತ್ತಿದ್ದೇನೆಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನನ್ನ ಮಗ ಕರೆದುಕೊಂಡು ಬಂದಿರುತ್ತಾನೆಂದರೆ ಸರಿ. ನನ್ನ ಅಣ್ಣ ಹನುಮೇಗೌಡನ ಮನೆಯ ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕವನ್ನು ಹನುಮೇಗೌಡನ ಮಕ್ಕಳು ಕಟ್ಟುತ್ತಿದ್ದಾರೆಂದರೆ ಎಂದರೆ ಸಾಕ್ಷಿಯು ನಾನೇ ಕಟ್ಟುತ್ತೇನೆ, ಅದನ್ನು ಖರೀದಿಗೆ ನಾನೇ ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಮತ್ತು ನನ್ನ ಅಣ್ಣ ಹನುಮೇಗೌಡನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಎಂದೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಹೊರತು ಪಡಿಸಿ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಮಾಡಿಕೊಂಡ ಮೂಲ ವಿಭಾಗ ಪತ್ರ ನನ್ನ ಹತ್ತಿರ ಇದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ